# ಆಹಾ ಸುದ್ದಿ!

★ ಸಸಿತೋಟ



ಸಂಗೀತಕ್ಕೂ ತಿನ್ನುವ ಚೀಸ್‌ಗೂ ಎತ್ತಣದಿಂದೆತ್ತ ಸಂಬಂಧವಯ್ಯ ಎಂದು ನಮ್ಮಂಥವರು ಮೂಗಿನ ಮೇಲೆ ಬೆರಳಿಡಬಹುದು. ಆದರೆ ಸ್ವಿಸ್‌ನ ಖ್ಯಾತ ಎಮ್ಮೆಂಟಲ್ ಚೀಸ್ ತಯಾರಾಗುವ ಸಂದರ್ಭದಲ್ಲಿ ಅದಕ್ಕೆ ರಾಕ್, ಹಿಪ್ ಹಾಪ್ ಸಂಗೀತವನ್ನು ಕೇಳಿಸುತ್ತಾರಂತೆ. ಅದರ ಮೇಲೆ ಸಂಗೀತ ಪ್ರಭಾವ ಬೀರಿ ರುಚಿ ಹೆಚ್ಚಾಗಬಹುದು ಎಂಬುದು ಕಂಪೆನಿಯವರ ನಂಬಿಗೆಯಂತೆ. ಏನಿದ್ದರೂ ಮುಂದಿನ ಮಾರ್ಚ್‌ವರೆಗೆ ಕಾಯಬೇಕು ಸಂಗೀತ ತಿಂದು ಬೆಳೆದ ಚೀಸ್ ತಿಂದು ಕುಣಿತಕ್ಕೆ ಹೆಜ್ಜೆ ಹಾಕಲು...!



ಕೊಲಂಬಿಯಾದ ಎರಿಕ್ ರಮಿರೇಝ್‌ಗೆ ಜೀವಂತ ಅಸ್ಥಿಪಂಜರದಂತೆ ಕಾಣುವ ಹುಚ್ಚು. ಕಿವಿ, ಮೂಗು ಕತ್ತರಿಸಿಕೊಂಡು 'ಶೂರ್ಪನಖಿ' ನಾಗಿರುವ ಈತನ ಮುಂದಿನ ಗುರಿ ಜನನಾಂಗಕ್ಕೆ ಕತ್ತರಿ ಹಾಕಿಕೊಳ್ಳುವುದಂತೆ. ಕೊನೆಗೆ ಜೀವಂತ ಸಮಾಧಿ. ಪರಲೋಕಕ್ಕೆ ಹೋದ ಮೇಲೂ ಏನೇನು ಹುಚ್ಚಾಟ ಮಾಡುತ್ತಾನೋ! ಅಲ್ಲಿದ್ದವರು ಈಗಲೇ ಸಿದ್ಧತೆ ನಡೆಸಿಕೊಳ್ಳುವುದು ಒಳಿತು.

ಮೇಕಪ್ ಹಾಗೂ ಸೌಂದರ್ಯ ಮಾರುಕಟ್ಟೆಯಲ್ಲಿ ಚಿತ್ರವಿಚಿತ್ರ ಪ್ರಯೋಗಗಳು ನಡೆಯುತ್ತಿವೆ. ಇತ್ತೀಚಿನ ಸೇರ್ಪಡೆ ತಲೆಗೂದಲಿಗೆ ಕತ್ತರಿ ಹಾಕುವುದು, ಅದರಿಂದಲೇ ಮೇಕಪ್ ಬ್ರಷ್ ಮಾಡಿಕೊಳ್ಳುವುದು. ಈ ವಿಡಿಯೋ ವೈರಲ್ ಆಗಿದ್ದು, ಬ್ರಷ್ ಉದ್ಯಮಗಳಲ್ಲಿ ನಡುಕ ಹುಟ್ಟಿಸಿರಬಹುದು.



ಜಪಾನಿನ ಕಂಪನಿಯೊಂದು ರಾತ್ರಿ ಸರಾಸರಿ 6 ತಾಸು ನಿದ್ರಿಸುವ ಸಿಬ್ಬಂದಿಗೆ ಪಾಯಿಂಟ್ಸ್ ನೀಡುತ್ತಿದ್ದು, ಇದನ್ನು ಕಚೇರಿಯ ಉಪಾಹಾರಗೃಹದಲ್ಲಿ ಆಹಾರಕ್ಕೆ ಹಣವಾಗಿ ಬದಲಾಯಿಸಿಕೊಳ್ಳಬಹುದಂತೆ. ನಿದ್ರೆ ಕಡಿಮೆಯಾದರೆ ಕೌಶಲವೂ ಕಡಿಮೆ ಎಂದಿರುವ ಕಂಪನಿ ಈ ನಿದ್ರೆಯನ್ನು ಅಳೆಯಲು ವಿಶೇಷ ಹಾಸಿಗೆ ವ್ಯವಸ್ಥೆ ಮಾಡಿದೆಯಂತೆ. ಹಗಲು ನಿದ್ರೆಯಾದರೆ ಒಂದು ಕೈ ನೋಡಬಹುದಿತ್ತು ಎಂದಿರಾ?

ಚಂಡೀಗಢ ಜಿಲ್ಲಾ ಕೋರ್ಟ್ ಈಗ ನಾಣ್ಯ ಎಣಿಸುವ ತಾಣವಾಗಿದೆಯಂತೆ. ವಿಚ್ಛೇದಿತ ಪತ್ನಿಗೆ ಪರಿಹಾರ ನೀಡುವ ಗಂಡಂದಿರು ನಾಣ್ಯಗಳ ಮೂಟೆ ಹೊತ್ತು ಕೋರ್ಟಿಗೆ ಬರುತ್ತಾರಂತೆ. ಕಳೆದ ತಿಂಗಳು ಪತಿ ಮಹಾಶಯನೊಬ್ಬ 24 ಸಾವಿರ ರೂಪಾಯಿಯನ್ನು ನಾಣ್ಯಗಳ ರೂಪದಲ್ಲೇ ತಂದಿದ್ದರೆ, ಇತ್ತೀಚೆಗೆ ಇನ್ನೊಬ್ಬ ಐದು ಸಾವಿರ ರೂಪಾಯಿ ನಾಣ್ಯಗಳನ್ನು 'ಎಣಿಸಿಕೊಳ್ಳಿ' ಎಂದು ಸುರುವಿ ಹೋಗಿದ್ದಾನಂತೆ. ಕೋರ್ಟಿನ ಸಿಬ್ಬಂದಿಗೆ ಹೊಸ ಕೆಲಸದಿಂದ ಖುಷಿಯಾಗಿದೆಯೋ ಇಲ್ಲವೋ ಗೊತ್ತಿಲ್ಲ.




ಇತ್ತ ಮೀಟೂ ಸದ್ದು ಮಾಡುತ್ತಿದ್ದರೆ, ಅತ್ತ ಅಮೆರಿಕ, ಕೆನಡಾ, ಆಸ್ಟ್ರೇಲಿಯಾದಲ್ಲಿ 'ಇಟ್ಸ್ ಓಕೆ ಟು ಬಿ ವೈಟ್' ಭಾರೀ ಶಬ್ದವನ್ನೇ ಉಂಟು ಮಾಡುತ್ತಿದೆಯಂತೆ. ಎರಡೂ ಆತಂಕ ಹುಟ್ಟಿಸುವಂತಹ ಶಬ್ದಗಳೇ. ಅಲ್ಲಿರುವ ಇತರ ಜನಾಂಗದವರು, ವರ್ಣೀಯರ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಹಾಗಾಗುತ್ತಿದ್ದು, ವೈಟಿನ ಸದ್ದೇ ಜೋರಾದರೆ, ಮೀಟೂ ಆತಂಕಿತರು ನಿಟ್ಟುಸಿರು ಬಿಡಬಹುದು.